ಜಿಲ್ಲಾಧಿಕಾರಿಗಳಿಗೆ ಇದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳಿಸಿಕೊಟ್ಟಿದ್ದೇವೆ. ಆಡಳಿತಾತ್ಮಕ ಕಾರಣವೋ, ತಾಂತ್ರಿಕ ಕಾರಣವೋ ಗೊತ್ತಿಲ್ಲ ಇಲ್ಲಿಯವರೆಗೆ ಆಗಿಲ್ಲ. ತುಮಕೂರು ಜಿಲ್ಲೆ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಕಳುಹಿಸಿರತಕ್ಕಂತಹ ಪತ್ರದ ಫ್ಯಾಕ್ಸ್ ಅನ್ನು ನಾನು ತರಿಸಿಕೊಂಡಿದ್ದೇನೆ. ಇನ್ನು 2-3 ದಿವಸದೊಳಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಜಿಲ್ಲಾಧಿಕಾರಿಯವರನ್ನು ನಾನು ಕೇಳಿದ್ದಕ್ಕೆ ಅವರು ಈಗ ಅಮೆಂಡ್‌ಮೆಂಟ್ ಮಾಡಿರುವ ಕಾಯಿದೆ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅಲ್ಲಿ ಕಾರ್ಯದರ್ಶಿ ಇದ್ದಾರೆ. ಅಧ್ಯಕ್ಷರ ಚೆಕ್‌ಗೆ ಸಹಿ ಹಾಕದೇ ಹೋದರೆ ಅಲ್ಲಿ ಯಾವುದೇ ಖರ್ಚನ್ನು ಮಾಡುವುದಕ್ಕೆ ಬರುವುದಿಲ್ಲ. ಕಾರ್ಯದರ್ಶಿ ಇರುವುದು ನಿಜ. ಇನ್ನೊಬ್ಬ ಕೌಂಟರ್ ಸಹಿ ಮಾಡುವುದಕ್ಕೆ ಅಧ್ಯಕ್ಷನೋ, ಆಡಳಿತಾಧಿಕಾರಿಯೋ ಬೇಕು. ಇದರಿಂದಾಗಿ ನನ್ನ ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ಏನಾದರೂ ತಾತ್ಕಾಲಿಕ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಹೈಕೋರ್ಟಿನಲ್ಲಿ ಈ ಪ್ರಸ್ತಾವನೆ ಇರುವುದರಿಂದ ತೊಂದರೆಯಾಗಿದೆ. ಕಾರ್ಯದರ್ಶಿ ದೈನಂದಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಾನೆ. ಆದರೆ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಅಧ್ಯಕ್ಷರು ಸಹಿ ಮಾಡಿದಿದ್ದರೆ ಆ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇನ್ನು 2-3 ದಿವಸಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹೈಕೋರ್ಟಿನಲ್ಲಿ ಎಂಟುವಾರ ಮಾತ್ರ ಸ್ಟೇ ಇತ್ತು. ನಂತರ ಮುಂದುವರೆದಿಲ್ಲ. ಎಂಟು ವಾರವೆಂದು ಸ್ಪಷ್ಟವಾಗಿ ಕೊಟ್ಟಿದ್ದಾರೆ. ನಿಮ್ಮ ಅಧಿಕಾರಿಗಳು ಇದನ್ನು ನೋಡಿಕೊಳ್ಳುತ್ತಿಲ್ಲ. ಅದು ಇನ್‌ಫೆಕ್ಚುಯಸ್ ಆಗಿದೆ.

ಶ್ರೀ ಎಂ.ಪಿ.ಪ್ರಕಾಶ್: ನನಗೆ ಬಂದಿರುವ ಮಾಹಿತಿ ಪ್ರಕಾರ ಈ ಪ್ರಕರಣ ಹೈಕೋರ್ಟಿನಲ್ಲಿ ಇತ್ಯರ್ಥವಾಗಬೇಕಾಗಿದೆ. ನಾನು ವೆರಿಫೈ ಮಾಡುತ್ತೇನೆ. ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು: ವೆರಿಫೈ ಮಾಡಿ, ಇರಲಿಲ್ಲವೆಂದರೆ ಮಾಡಿಕೊಡಿ. ಮಾನ್ಯ ಅಪ್ಪಚ್ಚು ರಂಜನ್‌ರವರೇ, ಮಾನ್ಯ ಗೃಹ ಮಂತ್ರಿಗಳು ಸಮಯ ಕೇಳಿದ್ದಾರೆ ಸಂಜೆಯೊಳಗೆ ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದಾರೆ. ಶೂನ್ಯವೇಳೆ ಮುಗಿಯಲಿ.

(ಉ) ಸೇಡಂ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮದಲ್ಲಿ ನಡೆದ ಘಟನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಗುಲ್ಬರ್ಗಾ

ಜಿಲ್ಲೆಯ ಸೇಡಂ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮದಲ್ಲಿ 6ನೇ ತಾರೀಖು 9 ಗಂಟೆಗೆ ನಡೆದಂತಹ ಒಂದು ಘಟನೆಯ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ಸೇಡಂನಿಂದ 14 ಕಿಲೋಮೀಟರ್‌ನಲ್ಲಿರತಕ್ಕಂತಹ ಅಳ್ಳೊಳ್ಳಿ ಗ್ರಾಮದಲ್ಲಿ ಎರಡು ಗುಂಪಿನಲ್ಲಿ ಘರ್ಷಣೆ ನಡೆದು ಅಲ್ಲಿ ಜೋಪಡಿಯಲ್ಲಿರತಕ್ಕಂಥ ಹೋಟೆಲಿಗೆ ಬೆಂಕಿ ಹಚ್ಚಿದ್ದಾರೆನ್ನುವ ಆಪಾದನೆ ಮೇಲೆ ಜಗಳ ನಡೆದು ಕೊನೆಗೆ 6ನೇ ತಾರೀಖು ರಾತ್ರಿ 9 ಗಂಟೆಗೆ ಹೊಡೆದಾಟ ಪ್ರಾರಂಭವಾಯಿತು. ಆ ಗುಂಪು ಘರ್ಷಣೆಯಲ್ಲಿ ಚಂದ್ರಪ್ಪ ಮತ್ತು ಶಂಕರಪ್ಪ ಇವರಿಬ್ಬರೂ ಕೂಡ ಪ್ರಜ್ಞಾ ಶೂನ್ಯರಾದರೆಂದು ದೂರವಾಣಿ ಮುಖಾಂತರ ಸೇಡಂ ಸಬ್ ಇನ್ಸ್‌ಪೆಕ್ಟರ್ ಅವರಿಗೆ ತಿಳಿಸಿದ್ದಾರೆ. ಆ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀ ಪೂರ್ಣ ಸಿಂಗ್ ರಾಥೋಡ್ ಎಂಬುವವರು ಆ ಊರಿಗೆ ಧಾವಿಸಿ ಆ ಸ್ಥಾಟಿಗೆ ಹೋಗುತ್ತಾರೆ. ಅಲ್ಲಿ ಏನು ಎರಡು ಕೋಮಿನ ಮಧ್ಯೆ ಜಗಳ ನಡೆದಿತ್ತು ಆ ಜಗಳವನ್ನು ಬಿಡಿಸತಕ್ಕಂತಹ ಪ್ರಯತ್ನ ಮಾಡುವುದನ್ನು ಬಿಟ್ಟು ಅಲ್ಲಿ ಯಾರ್ಯಾರು ಜನ ಇದ್ದರೋ ಆ ಎಲ್ಲಾ ಜನರ ಮೇಲೆ ಲಾಠಿ ಪ್ರಹಾರ ಮಾಡಿದ್ದಾರೆ. ನಂತರ ರಾಮಣ್ಣ ಎನ್ನುವ ಒಬ್ಬ 32 ವರುಷದವನು ಅವರ ಲಾಠಿಗೆ ಬಲಿಯಾಗಿ ಅವನೂ ಕೂಡ ಪ್ರಜ್ಞಾಶೂನ್ಯವಾಗಿ ಬೀಳುತ್ತಾನೆ. ಆಗ ಪೂರ್ಣಸಿಂಗ್ ರಾಥೋಡ್ ಅವರು ಅವನನ್ನು ಜೀಪಿನಲ್ಲಿ ಹಾಕಿಕೊಂಡು ಅವರ ಅಣ್ಣ ದೇವಪ್ಪ ಮತ್ತು ಅವರ ತಾಯಿ ಮಾಣಿಕ್ಯಮ್ಮ ಇವರೆಲ್ಲರನ್ನೂ ಸೇಡಂ ಆಸ್ಪತ್ರೆಗೆ ತಂದು ರಾಮಣ್ಣನನ್ನು ಅಲ್ಲಿ ಅಡ್ಮಿಟ್ ಮಾಡಿಸಿ ತರಾತುರಿಯಲ್ಲಿ ತನ್ನ ಮನೆಗೆ ಹೋಗುತ್ತಾರೆ. ರಾಮಣ್ಣನ ಮರಣ ಆಸ್ಪತ್ರೆಯಲ್ಲಿ ಆಗುತ್ತದೆ. ಅದಕ್ಕಿಂತ ಮುಂಚೆ ಜೀಪಿನಲ್ಲೇ ಆಗಿತ್ತೋ ಅಥವಾ ಅಲ್ಲಿ ಬಂದ ಮೇಲೆ ಆಯಿತೋ ಎನ್ನುವ ವರದಿ ಇಲ್ಲಿ ಇಲ್ಲ. ಅನ್-ಕಾನ್‌ಷಿಯಸ್ ಇದ್ದಾನೆಂದು ಜೀಪಿನಲ್ಲಿ ಹಾಕಿಕೊಂಡು ಬಂದ ಮೇಲೆ ಖಂಡಿತವಾಗಿ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆನ್ನುವ ಮಾಹಿತಿ ಇದೆ. ಈ ಆಪಾದನೆ ತನ್ನ ಮೇಲೆ ಎಲ್ಲಿ ಬರುತ್ತದೆಯೋ ಎಂದು ತಿಳಿದುಕೊಂಡು ಶ್ರೀಮಾನ್ ಪೂರ್ಣಸಿಂಗ್‌ರಾಥೋಡ್ ಇವರು ಈ ರಾಮಣ್ಣನ ಮರಣಕ್ಕೆ ಚಂದ್ರಷಾ ಮತ್ತು ಶಂಕರಪ್ಪ ಎಂಬುವವರು ಕಾರಣಕರ್ತರು ಎಂದು ಹೇಳುತ್ತಾರೆ. ಅವರಿಬ್ಬರೂ ಪ್ರಜ್ಞಾ ಶೂನ್ಯರಿದ್ದಾರೆಂದು ದೂರವಾಣಿ ಬಂತು ಎಂದು ಇವರು ಅಲ್ಲಿಗೆ ಧಾವಿಸಿದ್ದರು. ಆದರೆ ಇವರಿಬ್ಬರೂ ರಾಮಣ್ಣನಿಗೆ ಹೊಡೆದಿದ್ದಾರೆಂದು ಎಫ್.ಐ.ಆರ್‌ನಲ್ಲಿ ಸೇರಿಸಿದ್ದಾರೆಂದು ತಿಳಿದು ಅಲ್ಲಿನ ಜನ ರೊಚ್ಚಿಗೆದ್ದಿದ್ದಾರೆ. ಸುಮಾರು 5 ತಿಂಗಳ ಹಿಂದೆ ರಾಮಣ್ಣನ ಅಣ್ಣನಾಗಿದ್ದ ಮೈಲಪ್ಪ ಎಂಬ ಯುವಕನ ಕೊಲೆ ಸೇಡಂ ತಾಲ್ಲೂಕಿನಲ್ಲಿ ಆಯಿತು. ಅವನು ಸೇಡಂ ಬಸ್ ನಿಲ್ದಾಣದಿಂದ ಸರಕಾರಿ ಬಸ್ ಅನ್ನು ಹತ್ತಿಕೊಂಡು ಅಳ್ಳೊಳ್ಳಿ ಗ್ರಾಮಕ್ಕೆ ಹೋಗುವಾಗ ಅವನು ಬಸ್ ಅನ್ನು ಇಳಿದ ತಕ್ಷಣ ಯೂರಿನ್ ಪಾಸ್ ಮಾಡಲಿಕ್ಕೆಂದು ಬಯಲಿನಲ್ಲಿ ಕುಳಿತಾಗ ಈ ಗೂಂಡಾಗಳು ಅವನ ಮೇಲೆ ಹಲ್ಲೆ ಮಾಡಿ ಅವನ ಕೊಲೆಯನ್ನು ಆಗ ಮಾಡಿದರು. ಆ ಕೊಲೆಯಾಗಿ 5-6 ತಿಂಗಳಾಗಿದೆ. ಈಗ ಪುನಃ ಈತನ ಮೇಲೆ ಆಗಿದೆ. ಗುಂಪು ಘರ್ಷಣೆಯಲ್ಲಿ ಜನ ಮಾಡಿದ್ದು ಅವನೂ ಅಲ್ಲಿಗೆ ಹೋಗಿದ್ದರೆ ಅದು ಬೇರೆ

ವಿಚಾರ ಕಾನೂನಿನ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅದನ್ನು ಸರ್ಕಾರ ಮಾಡುತ್ತದೆ. ಆದರೆ ಪೊಲೀಸಿನವರೇ ಅವರನ್ನು ಸ್ಟೇಷನ್‌ನಲ್ಲಿ ಥಳಿಸಿ ಆಮೇಲೆ ಅವನನ್ನು ಅಡ್ಮಿಟ್ ಮಾಡಿಸಿದ್ದಾರೆ. ಇವನನ್ನು ಚಂದ್ರಷಾ ಮತ್ತು ಶಂಕರಪ್ಪ ಎಂಬುವವರು ಹೊಡೆದು ಹಾಕಿದ್ದಾರೆನ್ನುವ ಮಾತನ್ನು ಹೇಳಿಕೊಂಡು ಎಫ್.ಐ.ಆರ್. ರಿಜಿಸ್ಟರ್ ಮಾಡಿರತಕ್ಕಂಥಾದ್ದು ಏನು ಇದೆ ಇದು ಸರಿಯಲ್ಲ. ಅಲ್ಲಿರತಕ್ಕಂತಹ ಸಬ್ ಇನ್ಸ್‌ಪೆಕ್ಟರ್ ಮತ್ತು ಅಲ್ಲಿರತಕ್ಕಂತಹ ಯಾರೇ ಸರ್ಕಲ್ ಇನ್ಸ್‌ಪೆಕ್ಟರ್ ಇರಬಹುದು ಇವರುಗಳು ಕಾನೂನನ್ನು ತಮ್ಮ ಕೈಯ್ಯಲ್ಲಿ ತೆಗೆದುಕೊಂಡಿದ್ದಾರೆ.

1.00 ಪಿ.ಎಂ

ಮತ್ತು ಆ ಏರಿಯಾದಲ್ಲಿ ಒಂದು ಭೀತಿಯ ವಾತಾವರಣವಾಗಿದೆ. ಏಕೆಂದರೆ ಇದೊಂದೇ ಘಟನೆಯಾಗಿದ್ದರೆ ಅಡ್ಡಿ ಇರಲಿಲ್ಲ. ಹಿಂದೆ ಮೈಲಪ್ಪ ಎನ್ನುವವರೂ ಕೂಡ ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿದ್ದ. ಅನೇಕ ಜನ ಬಡವರಿಗೆ ಲೋನ್ ತೆಗೆಸಿಕೊಡುವುದು, ಅಥವಾ ಅವರ ಗ್ರಿವೆನೆಸ್‌ಸನ್ನು ಬಿಡಿಓ ಆಗಲೀ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್ ಹತ್ತಿರ ಒಯ್ದು ಹೇಳಿಕೊಡತಕ್ಕಂಥದ್ದು ಇಂಥ ಕೆಲಸಗಳನ್ನು ಮಾಡುತ್ತಿದ್ದ. ಆಗ ಏನು ಹೇಳಿದರು ಎಂದರೆ ಊರಿನಲ್ಲಿ ಕೆಲವು ಜನರಿಗೆ ವೈಮನಸ್ಸು ಇತ್ತು. ಅವರು ಈ ಘಟನೆಯನ್ನು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿ ಅದು ಘಟನೆಯನ್ನು ಮುಚ್ಚಿಹಾಕತಕ್ಕಂಥದ್ದು ಅಥವಾ ಯಾರು ಆ ಘಟನೆಯಲ್ಲಿ ಇನ್‌ವಾಲ್ವ್ ಆಗಿದ್ದರೋ, ಶಾಮೀಲು ಆಗಿದ್ದರೋ ಅವರಿಗೆ ರಕ್ಷಣೆ ಕೊಡುವ ಕೆಲಸ ಅಲ್ಲಿನ ಕೆಲವು ಅಧಿಕಾರಿಗಳು ಮಾಡಿದ್ದರು. ಕೆಲವು ಮುಖಂಡರೂ ಕೂಡ ಮಾಡಿದ್ದರು. ಇವತ್ತು ಪುನಃ ಏನಾಗಿದೆ ಎಂದರೆ ಅವರು ಜಗಳ ನಡೆದಾಗ ಬಿಡಿಸುವುದಕ್ಕೆ ಹೋದಂಥ ಮನುಷ್ಯನ ಮೇಲೆ ಪೊಲೀಸರೇ ಅವರ ಮೇಲೆ ಲಾಠಿ ಪ್ರಹಾರ ಮಾಡಿ ಮತ್ತು ತಾವೇ ಜೀಪಿನಲ್ಲಿ ಹಾಕಿಕೊಂಡು ಬಂದು, ಅವನನ್ನು ಯಾರು ಇಬ್ಬರು ಕೊಲೆ ಮಾಡಿದ್ದಾರೆ ಎಂದು ಹೇಳಿದ್ದಾರೆ, ಆ ಇಬ್ಬರು ವ್ಯಕ್ತಿಗಳ ಹೆಸರನ್ನು ಹೇಳುವುದಿಲ್ಲ. ಅವರು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿ ಪೊಲೀಸರು ತಾವು ಉಳಿಯಬೇಕು ಎನ್ನುವ ದೃಷ್ಟಿಯಿಂದ ಇವತ್ತು ಏನು ಪ್ರಯತ್ನ ಮಾಡುತ್ತಿದ್ದಾರೆ, ಅದು ನಿಜವಾಗಿಯೂ ಇದರಿಂದ ಆ ಭಾಗದಲ್ಲಷ್ಟೇ ಅಲ್ಲ, ಇಡೀ ಜಿಲ್ಲೆಯಲ್ಲಿ ಒಂದು ದ್ವೇಷತ್ವದ ವಾತಾವರಣವನ್ನು ಉಂಟುಮಾಡಿದಂತಾಗಿದೆ ಎನ್ನುವ ಮಾತನ್ನು ನಿಮಗೆ ಹೇಳಬೇಕು. ತಮಗೂ ಕೂಡ ಇದು ಬಂದಿರಬಹುದು. ಇದು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ, ಕನ್ನಡಪ್ರಭಾ, ಸಂಯುಕ್ತ ಕರ್ನಾಟಕದಲ್ಲಿ ಎಲ್ಲಾ ಲೀಡಿಂಗ್ ಪೇಪರ್ಸ್‌ನಲ್ಲಿ ಇದು ಬಂದಿದೆ. ಇದು ಆರನೇ ತಾರೀಖಿನಂದು ಆಗಿರುವ ಘಟನೆ ಬಗ್ಗೆ ಇಲ್ಲಿಯವರೆಗೂ ಸರ್ಕಾರ ಸುಮ್ಮನೆ ಕುಳಿತಿದ್ದಾರೋ ಏನೋ ನನಗೆ ಗೊತ್ತಿಲ್ಲ. ಒಂದು ಕಡೆ ಇಮ್ಮೆಡಿಯೇಟ್ಲಿ ಅಲ್ಲಿ ರಾತ್ರಿ ಸೂಪರಿಂಟೆಂಡೆಂಟ್‌ರವರು ಹೋಗಿ ರವೀಂದ್ರರವರು ಸ್ಪಾಟನ್ನು ವಿಸಿಟ್ ಮಾಡಿದ್ದಾರೆ ಅದೇ ರಾತ್ರಿ ಎಂದು ಬಂದಿದೆ. ಆದರೆ ಬರೀ ಅವರು

ವಿಸಿಟ್ ಮಾಡಿರತಕ್ಕಂಥದ್ದು ಅಷ್ಟೇ ಅಲ್ಲ. ಇವತ್ತು ಆಗಬೇಕಾಗಿರುವುದು ಏನೆಂದರೆ ಕಾನೂನನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಸಬ್ ಇನ್ಸ್‌ಪೆಕ್ಟರ್ ಅವನನ್ನು ಏನು ಕೊಲೆ ಮಾಡಿದ್ದಾನೆ, ಅದರ ಬಗ್ಗೆ ಒಂದು ಎಫ್.ಐ.ಆರ್. ಸಿದ್ಧ ಆಗಬೇಕು. ಅಂದರೆ ಸೆಕ್ಷನ್ 302ರಲ್ಲಿ ಅವನ ವಿರುದ್ಧ ಕೇಸನ್ನು ರಿಜಿಸ್ಟರ್ ಮಾಡಿ ಅವನ ಮೇಲೆ ಛಾರ್ಜ್‌ಷೀಟ್ ಹಾಕುವ ಕೆಲಸವನ್ನು ಮಾಡಬಹುದು. ಎರಡನೆಯದು ಯಾವ ಕುಟುಂಬ ಇವತ್ತು ಪೋಲೀಸರ ಒಂದು ದೌರ್ಜನ್ಯಕ್ಕೆ ಒಳಗಾಗಿದೆ, ಯಾರು ಸತ್ತು ಹೋಗಿದ್ದಾರೆ, ಅವರ ಕುಟುಂಬಕ್ಕೆ ಸಮಾಜಕಲ್ಯಾಣ ಇಲಾಖೆಯವರಾದರೂ ಕೊಡಿ, ಪೊಲೀಸ್ ಇಲಾಖೆಯಿಂದಲಾದರೂ ಕೊಡಿ. ಯಾವುದಾದರೂ ಇಲಾಖೆಯಿಂದ ಅವರಿಗೆ ಯಥಾಪ್ರಕಾರ ನೀವು ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡುತ್ತೀರಿ, ಅದನ್ನೂ ಕೂಡ ಕೊಡುವ ವ್ಯವಸ್ಥೆಯಾಗಬೇಕು. ಅಲ್ಲಿಯವರೆಗೆ ಇಮ್ಮೆಡಿಯೇಟ್ಲಿ ಈ ಸಬ್ ಇನ್ಸ್‌ಪೆಕ್ಟರ್ ಯಾರು ಈ ಒಂದು ಘಟನೆಗೆ ಕಾರಣಕರ್ತನಾಗಿದ್ದಾನೆ,ಮತ್ತು ಇಂಥ ಅಧಿಕಾರಿಗಳಿಗೆ ಒಂದು ಬೆಂಬಲ ನೀಡುವಂಥವರು ಯಾರೇ ಇರಬಹುದು, ಎಂಥ ದೊಡ್ಡ ಮುಖಂಡರೇ ಇರಬಹುದು ಅಲ್ಲಿ ಸ್ಥಳೀಯ ಯಾವ ಜನರೇ ಇದ್ದರೂ ಕೂಡ ಅವನಿಗೆ ದಾಕ್ಷಿಣ್ಯ ಇಲ್ಲದೇ ಇಮ್ಮೆಡಿಯೇಟ್ಲಿ ಅರೆಸ್ಟ್ ಮಾಡಿ ಅವನನ್ನು ಜ್ಯುಡಿಷಿಯಲ್ ಕಸ್ಟಡಿಯಲ್ಲಿಡಬೇಕು. ಅಲ್ಲಿ ಇಟ್ಟು, ನೀವು ಬೇರೆಯವರಿಗೆ ಯಾವ ರೀತಿಯಾಗಿ ಕಾನೂನು ರೀತಿಯಾಗಿ ಕ್ರಮವನ್ನು ಜರುಗಿಸುತ್ತೀರೋ ಅದೇ ರೀತಿಯಾಗಿ ಕಾನೂನಿನ ಕ್ರಮವನ್ನು ಇವನನ್ನು ಕೂಡ ಒಬ್ಬ ಸಾಮಾನ್ಯ ವ್ಯಕ್ತಿ ಎಂದು ತಿಳಿದುಕೊಂಡು ಕ್ರಮ ಜರುಗಿಸಿ. ಇಲ್ಲದಿದ್ದರೆ ಏನಾಗುತ್ತದೆ, ಎಂದರೆ ನಾಳೆ ಯಾರೋ ಹೊಡೆದರು, ಅದಕ್ಕೆ ಅಲ್ಲಿಗೆ ಮುಗಿದುಹೋಯಿತು ಎಂದಾಗಿ, ಯಾರು ಕೇಳುವುದಿಲ್ಲ ಎನ್ನುವ ಮಾತು ಆಗಬಾರದು. ತನಿಖೆ ಬೇಕಾದರೆ ನಿಮ್ಮ ಅಧಿಕಾರಿಗಳು ಇದ್ದಾರೆ ನೀವು ಕಳುಹಿಸಿ ಮಾಡಿಸಿ. ಇವತ್ತು ಸ್ಪಷ್ಟವಾಗಿ ಎಫ್.ಐ.ಆರ್.ನಲ್ಲಿಯೇ ಇದೆ. "According to the FIR the clash between two groups started around 9.30 P.M. and a case was registered at Sedam Police Station at 11.30 P.M. based on a complaint by one Devappa, the victims brother. According to the F.I.R. 2 groups of Daliths clashed over the recent burning of a tea stall in the village. One group accused Shankarappa of torching the tea stall. This lead to a heated argument resulting in fight between 2 groups. In the meelee one person by name Chandrappa fell un concious." ನಾನು ಇದೇ ಹೇಳುವುದು. ಯಾವಾಗ ಅವನು ಅನ್‌ಕಾಶಿಯಸ್ ಆಗುತ್ತಾನೆ, ಆದರೆ ಅವನೇ ಹೊಡೆದನು ಎನ್ನುವಂಥದ್ದು ಇನ್ನೊಂದು ಕಡೆ ಛಾರ್ಜ್‌ಷೀಟಿನಲ್ಲಿ ಹೇಳುತ್ತೀರಲ್ಲಾ, ಅದು ಹೇಗೆ? ಯಾರೇ ಇರಲಿ. ಇವನು ಇದ್ದರೆ ಇವನಿಗೂ ಮಾಡಿ. ಆದರೆ ಪೊಲೀಸರು ಹೊಡೆದಿದ್ದರೆ

ಪೊಲೀಸರಿಗೂ ಕೂಡ ನೀವು ಎನ್‌ಕ್ವೈರಿ ಮಾಡಿ ಕ್ರಮವನ್ನು ಜರುಗಿಸುವುದು ಅವಶ್ಯಕತೆ ಇದೆ. ಅದಕ್ಕಾಗಿ ಇಮ್ಮೆಡಿಯೇಟ್‌ಲಿ ಅವರಿಗೂ ನೀವು ಜ್ಯುಡಿಷಿಯಲ್ ಕಸ್ಟಡಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಎಫ್.ಐ.ಆರ್. ಕೇಸ್ ರಿಜಿಸ್ಟರ್ ಮಾಡಬೇಕಾಗುತ್ತದೆ. ವಿಕ್ಟಿಮ್ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಹಣವನ್ನು ಒದಗಿಸಬೇಕಾಗುತ್ತದೆ. ಮುಂದೆ "The Sedam Police were informed immediately of the incident on the fourth. The police party lead by S.I.Poorna Singh rushed to the spot and found Ramanna lying unconcious. Arrangements were made to shift the unconcious person to a hospital in Sedam, the FIR states. But, a person in the village, on the condition of anonimity, said Ramanna's death occured only after the arrival of the police party. According to the sources one of those involved in the clash fell unconcious about which Shankarappa informed to the Sedam police over phone. After arrival of the police they have started registering the names of persons allegedly responsible for the clash, on the basis of the informatioin supplied by Shankarappa without verifying the facts. When the names of Devappa, Ramanna's brother was also registered, Ramanna objected and charged that the police were booking innocent people. Enraged by this, Rathod, according to sources slapped Ramanna twice and the latter collapsed and fell to the ground." ಹೀಗೆ ಆದಮೇಲೆ ಅವನನ್ನು ತೆಗೆದುಕೊಂಡು ಹೋಗಿ ಪೊಲೀಸ್‌ಸ್ಟೇಷನ್‌ನಲ್ಲಿ ಹೊಡೆದು ಬಡಿದಮೇಲೆ ಅವನು ತೀರಿಕೊಂಡಿದ್ದಾನೆ ಎನ್ನುವ ಸುದ್ದಿ ಕೂಡ ಇದೆ. ಮತ್ತು ಈಗಾಗಲೇ ಪೊಲೀಸ್ ಸೂಪರಿಂಟೆಂಡೆಂಟ್‌ನವರು ಹೋಗಿ ಇದರ ಎನ್‌ಕ್ವೈರಿಯನ್ನೂ ಕೂಡ ಮಾಡಿದ್ದಾರೆ. ಅದಕ್ಕಾಗಿ ಬರೀ ಸಸ್ಪೆಂಷನ್ ಇವತ್ತಿನ ದಿನ ಪನಿಷ್‌ಮೆಂಟ್ ಅಲ್ಲ. ಆದ್ದರಿಂದ ಇದಕ್ಕೇನಾದರೂ ಪರಿಹಾರ ಕೊಡಬೇಕು ಎಂದರೆ ಈ ದಿಕ್ಕಿನಲ್ಲಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇದೇ ರೀತಿಯಾಗಿ ಸರ್ಕಾರದ ಒಂದು ಕುಮ್ಮಕ್ಕು ಇದೆ ಎಂದು ನಾನು ಹೇಳುವುದಿಲ್ಲ. ಆದರೆ ತಮಗೆ ಯಾರೂ ಕೇಳುವವರು ಇಲ್ಲ ಎನ್ನುವಂಥ ಭಯ ಇಲ್ಲದೇ ಹೋದರೆ ಅಧಿಕಾರಿಗಳಿಗೆ ಯಾವ ಅಧಿಕಾರಿ ಕೂಡ ಈ ಕೆಲಸವನ್ನು ಮಾಡಬಹುದು ಎನ್ನುವ ಮಾತನ್ನು ಹೇಳುತ್ತೇನೆ. ಅದಕ್ಕೆ ಸರ್ಕಾರ ಏನು ಕ್ರಮ ಜರುಗಿಸುತ್ತದೆ ಎಂದು ಸ್ಪಷ್ಟ ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ದೀರ್ಘವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ನಾನು ಗೃಹಖಾತೆಗೆ ಕಳುಹಿಸಿಕೊಟ್ಟಿದ್ದೇನೆ ಮತ್ತು ಪೊಲೀಸ್ ಅಧಿಕಾರಿಗಳಿಗೂ ಹೇಳಿಕಳುಹಿಸಿದ್ದೇನೆ. ಸಂಬಂಧಪಟ್ಟಿರತಕ್ಕಂಥವರ ಹತ್ತಿರ ವಿವರಗಳನ್ನು ತರಿಸಿಕೊಂಡು ಈ ದಿವಸ ಸಾಯಂಕಾಲವೋ ಅಥವಾ ನಾಳೆ ಬೆಳಿಗ್ಗೆ ಇದಕ್ಕೆ ಸಂಪೂರ್ಣವಾದ ಉತ್ತರವನ್ನು ನಾವು ಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಒಪ್ಪಿಕೊಂಡೆ. ಏಕೆಂದರೆ ಅವರ ಹತ್ತಿರ ವಿವರ ಇಲ್ಲ. ತರಿಸಿಕೊಳ್ಳಬೇಕು. ಇವತ್ತು ಸಾಯಂಕಾಲದೊಳಗಾಗಿ ಸ್ಟೇಟ್‌ಮೆಂಟ್ ಮಾಡಿಸಿ ಅವರಿಗೆ ಪರಿಹಾರ ಕೊಡುವುದು ಮಾಮೂಲಿನಂತೆ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಆದಷ್ಟು ಪ್ರಯತ್ನಮಾಡಿ ಈ ದಿವಸ ಸಾಯಂಕಾಲ ತಪ್ಪಿದರೆ ನಾಳೆ ಬೆಳಿಗ್ಗೆಯಂತೂ ತಮ್ಮ ಅಪ್ಪಣೆಯನ್ನು ಪಡೆದು ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು: ಈಗ ಗಮನಸೆಳೆಯುವ ಸೂಚನೆಗಳು. ಬಿ.ಆರ್.ಪಾಟೀಲ್.ಹಾಗೂ ಮಲಕರೆಡ್ಡಿ.

ಶ್ರೀ ಕೆ.ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ನಮಗೆ ಒಂದು ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು: ಮಾನ್ಯ ಖರ್ಗೆಯವರೇ, ನೀವು ಅವರಿಗೆ ಹೇಳಿ ನಿಮ್ಮ ಸದಸ್ಯರಿಗೆ. ಅವರು ಜೀರೋ ಅವರ್‌ನಲ್ಲಿ ಮಾತನಾಡಬೇಕೆನ್ನುತ್ತಾರೆ. ಅಧ್ಯಕ್ಷರಿಗೆ ಹೋಗಿ ಹೇಳಿಲ್ಲ. ಅವರು ಸಂಬಂಧಪಟ್ಟ ಮಂತ್ರಿಗೆ ಏನೂ ಹೇಳಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಏನು ಹೇಳುತ್ತಾರೆಂದರೆ ಕೆ.ಇ.ಬಿ.ಬಗ್ಗೆ ಕೊಟ್ಟಂಥ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ, ಬೇರೆ ಏನಲ್ಲ.

ಶ್ರೀ ವಿ.ಮುನಿಯಪ್ಪ: ಬೇರೆ ಏನಲ್ಲ. ನಾವು ಕೊಟ್ಟಿರುವ ನೋಟೀಸ್‌ನ ಬಗ್ಗೆ ಪ್ರಸ್ತಾಪವಾಗಲಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ ಇದೆ. ಸ್ವಾಮಿ, ಈ ರಾಜ್ಯದ ರೈತರಿಗೆ ನೀರಾವರಿ ಪಂಪ್‌ಸೆಟ್ಟಿಗೆ ಅಸಮರ್ಪಕವಾದ ವಿದ್ಯುತ್‌ನ್ನು ಕೊಡುತ್ತಿದ್ದಾರೆ...

(ಗೊಂದಲ)

ಉಪಾಧ್ಯಕ್ಷರು: ನಾನು ಹೇಳುವುದನ್ನು ತಾವು ದಯಮಾಡಿ ಕೇಳಿ. ಯಾರೂ ಇಲ್ಲಿ ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಬೇಕಾದರೆ ಹೋಗಿ ಅಧ್ಯಕ್ಷರಿಗೆ ಹೇಳಿ ಅಲ್ಲಿ ಬರೆಸಿದ ಮೇಲೆ ಅವರು ಇಲ್ಲಿ ಲಿಸ್ಟ್ ಮಾಡಿ ಕೊಟ್ಟು ಹೋಗಿದ್ದಾರೆ. ಯಾರ್ಯಾರು ಎಂದು. ಆ ಲಿಸ್ಟ್‌ನಲ್ಲಿ ತಮ್ಮ ಹೆಸರು ಇಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ತಾವು ಆ ರೀತಿ ಮಾಡಿದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ವಿಷಯ ಪ್ರಸ್ತಾಪ ಮಾಡುತ್ತಿಲ್ಲ. ಅವರು ವಿಷಯ ಕೇಳಿದ್ದುದು ಏನೆಂದರೆ ಅಜೆಂಡಾದಲ್ಲಿ ಇವತ್ತು ರೂಲ್ 69 ಕೆಳಗೆ ಏನು ಚರ್ಚೆಗೆ ಬರುತ್ತಿದೆ, ಆ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ನಿನ್ನೆ ನಾವು ನೋಟೀಸ್ ಕೊಟ್ಟಿದ್ದೇವೆ. ನಮ್ಮ ಹೆಸರುಗಳನ್ನು ಅದರಲ್ಲಿ ಹಾಕದೆ ಅಥವಾ ನಮ್ಮ ನೋಟೀಸನ್ನು ನೀವು ಗಮನಕ್ಕೆ ತೆಗೆದುಕೊಳ್ಳದೆ ಕೆಲವು ಮಾತ್ರ ಬಂದಿದೆ. ಬಾಕಿಯವರು ನಮ್ಮ ನೋಟೀಸ್‌ನ್ನು ಏಕೆ ನೀವು ತೆಗೆದುಕೊಂಡಿಲ್ಲ ಎಂದು ಕೇಳುತ್ತಿದ್ದಾರೆ. ವಿಷಯ ಪ್ರಸ್ತಾಪ ಮಾಡುವುದಕ್ಕಲ್ಲ ಕೇಳುವುದಕ್ಕೆ.

ಉಪಾಧ್ಯಕ್ಷರು: ಅವರು ನೋಟೀಸ್ ಕೊಟ್ಟಿದ್ದುದು ನಿಜ. ಆದರೆ ಅದು ಆಡಿಟ್ ಆಗಿಲ್ಲ. ಅದನ್ನು 16ನೇ ತಾರೀಖು ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿಷಯ ಒಂದೇ ರೀತಿ ಇರುವಾಗ ಒಂದು ಆಡಿಟ್ ಆಗುತ್ತದೆ, ಇನ್ನೊಂದು ಏಕೆ ಆಗುವುದಿಲ್ಲ? ಇವತ್ತು ನೀವು ಅಜೆಂಡಾ ತರುತ್ತೀರಿ, ನಿನ್ನೆ ನೋಟೀಸ್ ಕೊಟ್ಟಮೇಲೆ ಇವತ್ತು ಏಕೆ ಬಂದಿಲ್ಲ?

ಉಪಾಧ್ಯಕ್ಷರು: ವಿಷಯ ಒಂದೇ ರೀತಿ ಇಲ್ಲದೆ, ಬೇರೆ ಬೇರೆ ವಿಷಯ ಇರುವುದರಿಂದ ಬಂದಿಲ್ಲ.

ಶ್ರೀ ವಿ.ಮುನಿಯಪ್ಪ: ಬೇರೆ ವಿಷಯ ಇಲ್ಲ, ಇದೂ ಸಹ ಕೆ.ಇ.ಬಿ.ಗೆ ಸಂಬಂಧಪಟ್ಟಿರುವುದು.

ಉಪಾಧ್ಯಕ್ಷರು: ವಿಷಯ ಒಂದೇ ರೀತಿ ಇದ್ದರೆ, ಆ ಸಮಯದಲ್ಲೇ ಪ್ರಸ್ತಾಪ ಮಾಡಬಹುದಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಉಪಾಧ್ಯಕ್ಷರೇ, ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟಮೇಲೆ, ನೀವು ಕನ್‌ವರ್ಟ್ ಮಾಡಿ ಇವರ ನೋಟೀಸನ್ನು ಸೇರಿಸಬಹುದಾಗಿತ್ತು. ರಿಜೆಕ್ಟ್ ಮಾಡುವುದಾದರೆ ಎರಡು ನೋಟೀಸನ್ನು ರಿಜೆಕ್ಟ್ ಮಾಡಬೇಕಾಗಿತ್ತು. ವಿಷಯ ಒಂದೇ ರೀತಿ ಇದ್ದರೆ, ಯಾರು ನೋಟೀಸ್ ಕೊಟ್ಟಿದ್ದಾರೆ ಅವರಿಗೆ, ಇಬ್ಬರೂ ಜೊತೆಯಲ್ಲೇ ಮಾತನಾಡಿ ಎಂದು ತಿಳಿಸಿ.

(ಗೊಂದಲ)

ಶ್ರೀ ವಿ.ಮುನಿಯಪ್ಪ: ಇದು ಕೆ.ಇ.ಬಿ.ಗೆ ಸಂಬಂಧಪಟ್ಟಂತಹ ವಿಷಯ, ಬಹಳ ಗಹನವಾದಂತಹ ವಿಷಯ, ಆದುದರಿಂದ ಇದನ್ನು ಪ್ರಸ್ತಾಪ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಅವರಿಗೂ ಸಹ ಅವಕಾಶ ಕೊಡುತ್ತೇವೆ. ನಾನು ಹೇಳುವುದೇನೆಂದರೆ, ಅಧ್ಯಕ್ಷರು ಒಂದು ಪಟ್ಟಿ ಮಾಡಿ ಇಟ್ಟಿದ್ದಾರೆ. ಶೂನ್ಯ ವೇಳೆಯಲ್ಲಿ ಯಾರ್ಯಾರು ಮಾತನಾಡುತ್ತಾರೆ, ಅಂತವರ ಹೆಸರನ್ನು ಪಟ್ಟಿ ಮಾಡಿ ಇಟ್ಟಿದ್ದಾರೆ.

(ಗೊಂದಲ)

ಬೇಕಾದರೆ ಅವರಿಗೂ ಸಹ ಅವಕಾಶ ಮಾಡಿ ಕೊಡೋಣ.

ಮಾನ್ಯ ಸದಸ್ಯರು: ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಈಗ ಗೃಹ ಖಾತೆಗೆ ಸಂಬಂಧಪಟ್ಟಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದು, ನನಗೂ ಸಹ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಪ್ರಸ್ತಾಪ ಮಾಡಿ.

ಶ್ರೀ ಕೆ.ಎನ್.ನಾಗೇಗೌಡ: ನಾಳೆ ಶೂನ್ಯ ವೇಳೆಯಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಇರುತ್ತಾರೆ, ಆ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ ತಮಗೆ ಒಳ್ಳೆಯ ಉತ್ತರಗಳು ಸಿಗುತ್ತದೆ. ಹಾಗೂ ಪ್ರಯೋಜನ ಆಗುತ್ತದೆ.

ಉಪಾಧ್ಯಕ್ಷರು: ಪ್ರಸ್ತಾಪ ಮಾಡಲಿ ಬಿಡಿ.

(ಊ) ಕೊಡಗಿನಲ್ಲಿ ''ಐಎಸ್‌ಐ'' ಜಾಲ ಕಾರ್ಯಾಚರಣೆ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರ ಪೇಟೆ): ಕೊಡಗಿನಲ್ಲಿ ಕನ್ನಡ ಜನತಾ ರಂಗ ಪತ್ರಿಕೆಯಲ್ಲಿ, ಶಕ್ತಿ ಪತ್ರಿಕೆಯಲ್ಲಿ, ಆಂದೋಲನ ಪತ್ರಿಕೆಯಲ್ಲಿ ಕೊಡಗಿನಲ್ಲಿ, ''ಐ.ಎಸ್.ಐ. ಜಾಲ ಕಾರ್ಯಾಚರಣೆ'' ಎಂದು ಪತ್ರಿಕೆಯಲ್ಲಿ ಬಂದಿದೆ. ಅದರ ಜೊತೆಗೆ ಕೊಯಮತ್ತೂರಿನಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದಂತಹ ಕೆಲವು ವ್ಯಕ್ತಿಗಳು ಸಿದ್ದಾಪುರದಲ್ಲಿ ಬಂಧಿಸಿದ್ದರು ಎಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೊಂದು ವಿಚಾರ, ಕೊಡಗಿನ ಒಬ್ಬ ಇಂಜಿನಿಯರ್‌ಗಳಲ್ಲಿರುವ ಹೆಡ್ ಕಾನ್ಸ್‌ಟೇಬಲ್ ಗೂಟಪ್ಪ ಅವರು ಪಾಕಿಸ್ಥಾನದ ಪ್ರಜೆಯ ಸಂಬಂಧ ಇಟ್ಟುಕೊಂಡಿದ್ದ ಎಂಬ ಆರೋಪದ ಮೇಲೆ ಅವರನ್ನು